ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 30-35
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ದಲಿತ–ಬಂಡಾಯ ಕಾದಂಬರಿಗಳು : ಪ್ರತಿಭಟನೆ ಮತ್ತು ಪ್ರತಿರೋಧದ ಭಾಷೆ

ವೆಂಕೋಬ ತಳವಾರ[1] ಮತ್ತು ಪ್ರೊ. ಜೋಗಿನಕಟ್ಟೆ ಮಂಜುನಾಥ[2]
ಸಂಶೋಧನಾ ವಿದ್ಯಾರ್ಥಿ[1], ಪ್ರಾಧ್ಯಾಪಕರು[2]
ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

Abstract:

ಭಾಷೆ ಮಾನವನ ಭಾವನೆ, ಚಿಂತನೆ, ಆಸೆ ಆಕಾಂಕ್ಷೆಗಳನ್ನು ಅಭಿವ್ಯಕ್ತಗೊಳಿಸಲು ಬಳಸುವ ಒಂದು ಮಹತ್ ಸಾಧನವೆಂದು ಹೇಳಬಹುದು. ಭಾಷೆ ಸಮಾಜದಲ್ಲಿಯೇ ಹುಟ್ಟಿ ಸಮಾಜದಲ್ಲಿಯೇ ಬೆಳೆದು ಸಮಾಜದಲ್ಲಿ ಅಳಿದು ಹೋಗುವಂತಹದ್ದು. ಭಾಷೆಯೆಂಬುದು ನಾವು ತಿಳಿದುಕೊಂಡಷ್ಟು ಸರಳವಾದ, ತಟಸ್ಥವಾದ ಸಂರಚನೆಯಲ್ಲ. ಅದು ಆಳದಲ್ಲಿ ವರ್ಗ, ಲಿಂಗ, ಜಾತಿ, ಸಾಮಾಜಿಕ, ಆರ್ಥಿಕ, ರಾಜಕೀಯ ಹಲವಾರು ಸಿದ್ಧಾಂತಗಳಿಗೆ ಬದ್ಧವಾದ ಒಂದು ವ್ಯವಸ್ಥೆಯಿಂದ ರೂಪಿತವಾದ ರಚನೆಯಾಗಿದೆ. ಅಂದರೆ ಭಾಷೆ ಕೇವಲ ಒಂದು ಸಂವಹನದ ಮಾಧ್ಯಮವಲ್ಲ, ಇದನ್ನು ಮೀರಿದ ಸಾಮಾಜಿಕ ಸಹಸಂಬಂಧಗಳನ್ನು ರೂಪಿಸುವ, ನಿಯಂತ್ರಿಸುವ ಅಧಿಕಾರ ಶಕ್ತಿ ಅದರದ್ದಾಗಿರುತ್ತದೆ. ಸಮಾಜದ ಪ್ರಬಲ ಸಮುದಾಯಗಳು ಅಪ್ರಬಲ ಸಮುದಾಯಗಳ ಮೇಲೆ ನಿಯಂತ್ರಣ ಸಾಧಿಸುವ ಮತ್ತು ತಮ್ಮ ಅಧಿಕಾರವನ್ನು ಸ್ಥಾಪಿಸಲು ಬಳಸುವ ಒಂದು ಆಯುಧವಾಗಿ ಕೆಲಸ ಮಾಡುತ್ತದೆ. ಇದರ ಮೂಲಕ ಶೋಷಕ, ಶೋಷಿತ ಎಂಬ ಎರಡು ಧ್ರುವಗಳಲ್ಲಿ ವಿಭಜನೆಹೊಂದಿ ಭಿನ್ನ ವಿಚಾರ ಪ್ರಣಾಳಿಕೆಗಳ ಜಗತ್ತನ್ನು ರೂಪಿಸುತ್ತವೆ. ಪ್ರಸ್ತುತ ಲೇಖನದಲ್ಲಿ ದಲಿತ ಬಂಡಾಯದ ಕಾದಂಬರಿಗಳಲ್ಲಿ ಬಳಸಿರುವ ಪ್ರತಿಭಟನೆ ಮತ್ತು ಪ್ರತಿರೋಧದ ಭಾಷೆಯನ್ನು ವಿಶ್ಲೇಷಣೆ ಮಾಡಲಾಗಿದೆ. ದಲಿತ ಬಂಡಾಯದ ಅನೇಕ ಕಾದಂಬರಿಗಳಲ್ಲಿ ಹಿಂದುಳಿದ ವರ್ಗದ ಪಾತ್ರಗಳು ಶೋಷಿತ ಸಮಾಜದ ವಿರುದ್ಧ ಪ್ರತಿಭಟಿಸಿ ತಮ್ಮ ಸಿಟ್ಟನ್ನು, ನೋವನ್ನು ಹೊರಹಾಕುವಂತೆ ನಿರೂಪಿತಗೊಂಡಿವೆ.

Keywords: *ದಲಿತ–ಬಂಡಾಯ ಸಾಹಿತ್ಯ, ಪ್ರತಿಭಟನೆ, ಪ್ರತಿರೋಧ, ಭಾಷೆ, ಶೋಷಿತ ಸಮಾಜ.*

ಪೀಠಿಕೆ

ಭಾಷೆಯು ಸಾಮಾಜಿಕ ವಾಸ್ತವವನ್ನು ಪ್ರತಿಬಿಂಬಿಸುವ ಕನ್ನಡಿಯಾಗಿರುವಂತೆ ಆ ವಾಸ್ತವವನ್ನು ಹೊಡೆದು ಹಾಕುವ ಅಸ್ತ್ರವು ಆಗಿದೆ. ಭಾಷೆಯ ಈ ಭಿನ್ನ ಪ್ರಣಾಳಿಕೆಗಳನ್ನು ಅದರ ತಾರತಮ್ಯದ ಆಯಾಮಗಳನ್ನು ಪ್ರತಿಭಟನೆ ಮತ್ತು ಪ್ರತಿರೋಧದ ನೆಲೆಯಿಂದ ವಿವೇಚಿಸಿದಾಗಲಂತೂ ಇನ್ನಷ್ಟು ಕುತೂಹಲಕರವಾದ ಆಯಾಮಗಳು ಬೆಳಕಿಗೆ ಬರುತ್ತವೆ. ಅನೇಕ ತೊಂದರೆಗಳನ್ನು ಅನುಭವಿಸಿ, ಅನ್ಯಾಯಕ್ಕೆ ಒಳಗಾದ ವ್ಯಕ್ತಿಗಳು ಒಂದು ವ್ಯವಸ್ಥೆ ವಿರುದ್ಧ ಅಥವಾ ವ್ಯಕ್ತಿಗಳ ವಿರುದ್ಧ ನೇರವಾಗಿ ವಿರೋಧವನ್ನು ಅಭಿವ್ಯಕ್ತಪಡಿಸುವ ಭಾಷೆಯನ್ನು ಪ್ರತಿಭಟನೆಯ ಭಾಷೆ ಎಂದು ಕರೆಯಲಾಗಿದೆ. ಅದೇ ರೀತಿ ಅನ್ಯಾಯಕ್ಕೆ ಒಳಗಾದ ವ್ಯಕ್ತಿಗಳು ಒಂದು

Please cite this article as: ವೆಂಕೋಬ ತಳವಾರ ಮತ್ತು ಜೋಗಿನಕಟ್ಟೆ ಮಂಜುನಾಥ. (2024). ದಲಿತ–ಬಂಡಾಯ ಕಾದಂಬರಿಗಳು : ಪ್ರತಿಭಟನೆ ಮತ್ತು ಪ್ರತಿರೋಧದ ಭಾಷೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 30–35

ವ್ಯವಸ್ಥೆ ವಿರುದ್ಧ ಅಥವಾ ವ್ಯಕ್ತಿ ವಿರುದ್ಧ ಪರೋಕ್ಷವಾಗಿ ಮಾರ್ಮಿಕವಾಗಿ ವಿರೋಧವನ್ನು ಅಭಿವ್ಯಕ್ತಪಡಿಸುವ ಭಾಷೆಯು ಪ್ರತಿರೋಧದ ಭಾಷೆಯಾಗಿದೆ. ಪ್ರತಿಭಟನೆಯ ಭಾಷೆಯಲ್ಲಿ ಸಿಟ್ಟು, ಆಕ್ರೋಶ, ಅಭಿಪ್ರಾಯಗಳನ್ನು ನೇರವಾಗಿ ಹೊರಹಾಕಲಾಗುತ್ತದೆ. ಆದರೆ ಪ್ರತಿರೋಧನೆಯ ಭಾಷೆಯಲ್ಲಿ ಅಸಹಾಯಕತೆ, ಮಾನಸಿಕರೋಧನೆ ಕಂಡು ಬರುತ್ತದೆ. ಮಾರ್ಮಿಕವಾಗಿ ತಮ್ಮ ತುಮುಲುಗಳನ್ನುಹಂಚಿಕೊಳ್ಳುವುದು ಕಂಡುಬರುತ್ತದೆ.

ದಲಿತ ಬಂಡಾಯದ ಅನೇಕ ಕಾದಂಬರಿಗಳಲ್ಲಿ ಹಿಂದುಳಿದ ವರ್ಗದ ಪಾತ್ರಗಳು ತಮ್ಮನ್ನು ಶೋಷಣೆ ಮಾಡುವ ವ್ಯವಸ್ಥೆಯ ವಿರುದ್ಧ, ಮೇಲ್ವರ್ಗದವರ ವಿರುದ್ಧ, ಪ್ರತಿಭಟಿಸಿ ತಮ್ಮ ಸಿಟ್ಟನ್ನು, ನೋವುನ್ನು ಹೊರಹಾಕಿ ಮಾತನಾಡುವಂತೆ ನಿರೂಪಿತಗೊಂಡಿವೆ. ಇನ್ನೂ ಕೆಲವು ಕೆಳವರ್ಗದ ಪಾತ್ರಗಳು ನೇರವಾಗಿ ಮೇಲ್ವರ್ಗದವರನ್ನು ಎದುರಿಸಲಾರದೆ ಅವರ ಕೋಪ ಆಕ್ರೋಶ ಅಸಹಾಯಕತೆ ಎಲ್ಲವೂ ಕೂಡಿದಾಗ ಮಾತನಾಡುವುದು ಇಲ್ಲವೇ ಮಾರ್ಮಿಕವಾಗಿ ಪ್ರತಿರೋಧಿಸಿ ಅಭಿವ್ಯಕ್ತಪಡಿಸುವುದನ್ನು ಕಾಣಲಾಗಿದೆ.

ಬರಗೂರು ರಾಮಚಂದ್ರಪ್ಪ ಅವರ ಕಾದಂಬರಿಗಳಲ್ಲಿ ದಲಿತ ಮತ್ತು ಬಂಡಾಯ ಪಾತ್ರಗಳು ವ್ಯವಸ್ಥೆಯ ವಿರುದ್ಧ, ಮೇಲ್ವರ್ಗದವರ ವಿರುದ್ಧ, ಉಗ್ರರೂಪವನ್ನು ತಾಳಿ ಪ್ರತಿಭಟಿಸುವುದು ಕಂಡುಬರುತ್ತದೆ. ಪ್ರಸ್ತುತ ಬರಗೂರು ರಾಮಚಂದ್ರಪ್ಪನವರ 'ಶಬರಿ' ಕಾದಂಬರಿಯಲ್ಲಿ ಚಂದ್ರ ಮತ್ತು ಶಬರಿಯ ಮದುವೆಯ ದಿನ ಚಂದ್ರನು ನರಸಿಂಹರಾಯಪ್ಪ ಮತ್ತು ರಾಮಜೋಯಿಸರ ಕಾಲಿಗೆ ಬೀಳದೆ ಅವರನ್ನು ನಿಂದಿಸಿ ಪ್ರತಿಭಟಿಸಿದ ಸಂದರ್ಭವನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ನರಸಿಂಹರಾಯಪ್ಪ ಶಬರಿಗೆ ಸೀರೆ ಕೊಟ್ಟ ನಂತರ ಶಬರಿಯು ನರಸಿಂಹರಾಯಪ್ಪ ಮತ್ತು ರಾಮ ಜೋಯಿಸರ ಪಾದಗಳಿಗೆ ನಮಸ್ಕರಿಸಿದಳು. ಚಂದ್ರ ಮುಖ ತಿರುಗಿಸಿಕೊಂಡು ಕೂತ. ಪೂಜಾರಪ್ಪ ಇದನ್ನು ಗಮನಿಸಿ ಹೇಳಿದ. "ಚಂದ್ರ, ಒಡೇರ್ ಕಾಲ್ಗೆ ನೀನು ಬೀಳ್‌ಬೇಕು" ಆಗ ಚಂದ್ರ ಉರಿದು ಉಕ್ಕುವಂತೆ ನೋಡಿದ "ಏನ್ ಹಂಗ್ ನೋಡ್ತೀಯ? ಲಗಾಯ್ತಿಂದ ನಡ್ಕಂಡ್ ಬಂದಿರಾದ್ನ ಬಿಡಾಕಾಗಲ್ಲ, ಕಾಲಿಗೆ ಬೀಳು" ಪೂಜಾರಪ್ಪ ಒತ್ತಾಯಿಸಿದ. "ಬೀಳಲ್ಲ ಅಂದ್ರೆ ಏನ್ ಮಾಡ್ತೀಯಾ?" ಚಂದ್ರ ಸ್ಪೋಟಗೊಂಡು ಹೇಳಿದ ಆಗ ಎಲ್ಲರೂ ಒಂದು ಕ್ಷಣ ತಬ್ಬಿಬ್ಬರಾದರು. ಆದರೆ ಪೂಜಾರಪ್ಪ ಸುಮ್ಮನಿರದೆ ಸಿಡಿದು ಮಾತನಾಡಿದ "ನೀನ್ ಇಂಗೆಲ್ಲ ಮಾತಾಡಿದ್ರೆ ರಕ್ತ ಕಾರ್ಕಂಡು ಸತ್ತೋಗ್ತೀಯ" ಎಂದು ಹೇಳಿದ "ಕಟ್ಕೊಂಡ್ ಹೆಂಡ್ತೀನ ಕಂಡೋರ್ ಮಗ್ಗಲಾಗ್ ಮಲುಗ್ಸಾ ಬದ್ಲು ಒಟ್ಟೀಗೆ ಸಾಯೋದೆ ವಾಸಿ" ಚಂದ್ರ ಪ್ರತಿಭಟಿಸಿ ಮಾತನಾಡಿದ.

"ದ್ಯಾವ್ರನ್ನೇ, ಕಂಡೋರ್ ಗಿಂಡೋರು ಅಂಬ್ತ ಮಾತಾಡ್ತೀಯಲ್ಲ ನಿನ್ ನಾಲ್ಗೆ ಸೇದೋಗ" ಎಂದು ಪೂಜಾರಪ್ಪ ಪ್ರತಿಯಾಗಿ ಅಬ್ಬರಿಸಿದ. "ಕಂಡೋರ್ ಹೆಂಡ್ತೀರ ಜತೆ ಮಲ್ಗೋನು ಅದೆಂಥ ದೇವ್ರು? ಇದೆಲ್ಲ ಮೂಢನಂಬಿಕೆ ನನ್ ಹೆಂಡ್ತೀನ ನಾನು ದೇವಸ್ಥಾನಕ್ಕೆ ಕಳ್ಸಲ್ಲ". ಚಂದ್ರನ ಈ ಪ್ರತಿಭಟನೆಯ ಮಾತುಗಳಿಂದ ಎಲ್ಲರೂ ಗರಬಡಿದಂತೆ ನಿಂತರು.

ಈ ರೀತಿ ಶಬರಿ ಕಾದಂಬರಿಯಲ್ಲಿ ಕೆಳವರ್ಗದ ಪಾತ್ರಗಳು ಸಮಾಜದ ಮೂಢನಂಬಿಕೆ, ಪ್ರಾಚ್ಯಕಾಲದ ಅವ್ಯವಸ್ಥೆಯ ವಿರುದ್ಧ ಮತ್ತು ಮೇಲುವರ್ಗದವರ ಶೋಷಣೆಯ ವಿರುದ್ಧ ಪ್ರತಿಭಟಿಸಿ ಮಾತನಾಡಿರುವುದು ಕಂಡುಬರುತ್ತದೆ. 'ಶಬರಿ' ಕಾದಂಬರಿಯಲ್ಲಿ ಮದುವೆಯ ನಂತರ ಆ ಹೆಣ್ಣನ್ನು ಸಂಪ್ರದಾಯದಂತೆ ದೇವಸ್ಥಾನಕ್ಕೆ ಆಹ್ವಾನಿಸುವುದಕ್ಕೆ ರೇಷ್ಮೆಸೀರೆ, ಕುಪ್ಪಸದ ಬಟ್ಟೆ, ವೀಳ್ಯದೆಲೆ, ಅರಿಶಿನ ಕುಂಕುಮಗಳನ್ನು ತಟ್ಟೆಯಲ್ಲಿಟ್ಟು ಹೆಣ್ಣಿಗೆ ಒಪ್ಪಿಸಿ ದೇವಾಲಯಕ್ಕೆ ಬಂದು ಮೊದಲ ರಾತ್ರಿಯನ್ನು ದೇವರ ಜೊತೆ ಕಳೆಯಬೇಕೆಂಬುದು ಲಗಾಯ್ತಿಂದ ಬುಡಕಟ್ಟಿನವರು ನಡೆಸಿಕೊಂಡು ಬಂದ ಪದ್ಧತಿ. ಹಿಂದೆ ರಾಜರ ಕಾಲದಿಂದಲೂ ಈ ಪದ್ಧತಿ ಇದೆಯೆಂದು ಪ್ರತೀತಿ. ಈ ಪ್ರತೀತಿ ಎಂಬ ಮೂಡನಂಬಿಕೆಯ ವಿರುದ್ಧ ಚಂದ್ರ ಪ್ರತಿಭಟಿಸಿ

ಮಾತನಾಡಿರುವುದು ಈ ಕಾದಂಬರಿಯಲ್ಲಿ ಕಂಡು ಬರುತ್ತದೆ.

ಬಿ.ಟಿ. ಲಲಿತಾನಾಯಕ್ ಅವರ 'ಗತಿ' ಕಾದಂಬರಿಯು ಲಂಬಾಣಿ ಜನಾಂಗದ ಹಳ್ಳಿಯಲ್ಲಿನ ಚಿತ್ರಣವಾಗಿದೆ. ಆ ಹಳ್ಳಿಯಲ್ಲಿ ಲಚ್ಚಿ, ಸೋನಿ, ಹರಸಿಂಗ್, ಮಾನಸಿಂಗ್, ಪೂಜಾರಿಕಾಶಪ್ಪ ಮುಂತಾದ ಪಾತ್ರಗಳು ಕಂಡುಬರುತ್ತವೆ. ಹೆಣ್ಣು ಯಾವುದೇ ವರ್ಗಕ್ಕೆ ಸೇರಿರಲಿ, ವಿದ್ಯಾವಂತೆ ಇರಲಿ, ಅವಿದ್ಯಾವಂತೆಯಾಗಿರಲಿ, ಸಮಾಜ ಅವಳನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿ ಗುರುತಿಸುವುದು ಮಾತ್ರ ನಿಜವೆಂಬುದು ಇಲ್ಲಿ ತಿಳಿದು ಬರುತ್ತದೆ.

ಸೋನಿ ಬಡಕುಟುಂಬದಲ್ಲಿ ಬೆಳೆದ ಸಾಮಾನ್ಯ ಲಂಬಾಣಿ ಜನಾಂಗದ ಒಬ್ಬ ಹೆಣ್ಣುಮಗಳು. ಇವಳು ಮಾನಸಿಂಗ್ ಎಂಬುವವನೊಡನೆ ಮದುವೆಯಾಗುತ್ತಾಳೆ. ಒಂದು ದಿನ ಕುಟುಂಬದ ಗಂಡ ಹೆಂಡತಿ ನಡುವೆ ಜಗಳ ನಡೆದು ಬಲವಾದ ಪೆಟ್ಟು ಸೋನಿಯಾ ತೆಲೆಗೆ ಬೀಳುತ್ತದೆ. ಮಾನ್ಸಿಂಗ್ ತಲೆ ಕೆಡಿಸಿಕೊಳ್ಳದೆ ತನ್ನ ಪಾಡಿಗೆ ತಾನು ಹೊರಹೋಗುತ್ತಾನೆ. ಸೋನಿಯನ್ನು ಸೇರದ ಇವಳ ಮಾವ ಹರಸಿಂಗ್ ಅವಳನ್ನು ಆಸ್ಪತ್ರೆಗೆ ಸೇರಿಸುತ್ತಾನೆ. ಅವರ ಜೊತೆ ಲಚ್ಚಿಯು ಸಹ ಹೋಗುತ್ತಾಳೆ. ಆದರೆ ಅಲ್ಲಿ ಹರಸಿಂಗ್ ಆಸ್ಪತ್ರೆಯ ಬಿಲ್ಲನ್ನು ಕಟ್ಟದೇ ಸೋನಿ ಮತ್ತು ಲಚ್ಚಿಯನ್ನು ಬಿಟ್ಟು ಬರುವ ಪ್ರಯತ್ನ ಮಾಡುತ್ತಾನೆ. ಇದರಿಂದ ರೊಚ್ಚಿಗೆದ್ದ ಲಚ್ಚಿ ಹರಸಿಂಗ್‌ನನ್ನು ಬಲವಾಗಿ ಬಾರಿಸುತ್ತಾಳೆ ಆಗ ಹರಸಿಂಗ್ ಎಂಬ ಯಜಮಾನನ ವಿರುದ್ಧ ಕೈ ಮಾಡಿದ್ದು ತಪ್ಪು ಎಂದು ಪಂಚಾಯಿತಿ ಅವಳಿಗೆ ದಂಡ ಹಾಕುತ್ತದೆ.

"ಈಕಿ ಕಡಿಂದ ಭಯಂಕರ ತಪ್ಪಾಗೇತಿ!"

"ಅದರ ಸಲುವಾಗಿ ಈ ಹೆಣ್ಣುಮಗಳು ಪಂಚಾಯ್ತಿಗೆ ನೂರೊಂದು ರೂಪಾಯಿ ದಂಡ ತೆರಬೇಕಾಗ್ತದ! ಇದರಾಗ ದುಸರಾ ಮಾತಿಲ್ಲ!" ಎಂದು ಸಭೆ ಖಡಾ ಖಡಿಂತವಾಗಿ ಆಜ್ಞಾಪಿಸಿದಾಗ ಲಚ್ಚಿ ಸಿಟ್ಟಿನಿಂದ ಸಿಡಿದೆದ್ದಳು "ಇದೆಂಥ ಪಂಚಾಯ್ತಿ ನಡೇಸಿರಿ? ನಿಮ್ಮ ನ್ಯಾಯಕ್ಕೆ ಬೆಂಕಿ ಹಚ್ಲಿ! ಈ ನೀಚ ಮುದಿಯ ಬರೆ ಸುಳ್ಳಾಡೇ ಆಡ್ತಾನ ಅದಾನ ನೀವೆಲ್ಲ ಖರೆ ಅನ್ನಲಿಕೆ ಹತ್ತೀರಿ; ನನ್ನ ಮಾತನ್ನು ಕುಂಡಿಯಿಂದ ಒರೆಸಿ ಹಾಕಲಿಕ್ಕ ಹತ್ತೀರಿ!".

ಈ ರೀತಿ ಹೆಂಗಸೊಬ್ಬಳು ಪಂಚಾಯಿತರನ್ನು ಬಹಿರಂಗವಾಗಿ ತರಾಟೆಗೆ ತೆಗೆದುಕೊಂಡಿದ್ದು ಇದೇ ಮೊದಲ ಬಾರಿಯಾಗಿದ್ದರಿಂದ ಅವರ ಕಣ್ಣುಗಳು ಕೆಂಪಾದವು ಇದನ್ನು ಸಹಿಸದ ಅವರು "ಪಂಚರ ನ್ಯಾಯ ಅಂದ್ರ ದೇವರ ನ್ಯಾಯ! ಅದನ್ನ ಈಕೆ 'ಬೆಂಕಿ ಹಚ್ಲಿ' ಅಂತ ಹೇಳತ್ತಾಳ ಪೈಲಿ ಕಟ್ಟಬೇಕೆಂದಿದ್ದ ನೂರೊಂದು ರೂಪಾಯಿ ಅಲ್ಲ, ಅದರ ಮ್ಯಾಲೆ ಇಪ್ಪತ್ತೈದು ರೂಪಾಯಿ ದಂಡ ಕೊಟ್ಟು ನನ್ನ ತಪ್ಪಾತು ಅಂತ ಪಂಚಾಯಿತರ ಕಾಲು ಬೀಳಬೇಕು!" ಎಂದು ಹೇಳಿದರು.

ಪ್ರತ್ಯುತ್ತರವಾಗಿ ಲಚ್ಚಿ ಶಾಂತರೀತಿಯಿಂದ ಹೇಳಿದಳು. "ನೋಡ್ರಿ ನಿಮ್ಮ ಕಾಲು ಬೀಳಲಿಕ್ಕೆ, ದಂಡ ತೆರಲಿಕ್ಕೆ, ನಾಯೆನೂ ಮಂದಿ ಹೆಣ ಬೀಳ್ಸಿಲ್ಲ, ಯಾರದ್ದಾರ ಮನಿ ಮುರ್ದಿಲ್ಲ..... ನನ್ನದೇನೂ ತಪ್ಪಿಲ್ಲಂದ ಮ್ಯಾಲ ಒಂದ್ ಪೈಸಾನೂ ದಂಡ ಕೊಡುವಾಕಿಯಲ್ಲ ಅದೇನು ಮಾಡ್ಕೊಂತೀರೋ ಮಾಡ್ಕೋರಿ!" ಎನ್ನುತ್ತಾ ಆಕೆ ಹೊರನಡೆದಳು. ಪಂಚರ ಮತ್ತು ಹರಸಿಂಗ್‌ರ ಮಾತುಗಳಲ್ಲಿ ದರ್ಪದ ದೌರ್ಜನ್ಯದ ಭಾಷಾಸ್ವರೂಪ ಕಂಡುಬಂದರೆ, ಸಾಮಾಜಿಕ ವ್ಯವಸ್ಥೆ, ಹೆಣ್ಣಿನ ಮೇಲೆ ಆಗುವ ದೌರ್ಜನ್ಯ, ಪ್ರಭುತ್ವವನ್ನು ಪ್ರಶ್ನೆ ಮಾಡುವಂತಹ ಪ್ರತಿಭಟನೆಯ ಭಾಷಾರೂಪಗಳು ಲಚ್ಚಿ ಮತ್ತು ಸೋನಿ ಅವರ ಪ್ರತಿಕ್ರಿಯೆಯ ಮಾತುಗಳಲ್ಲಿ ಕಾಣಲಾಗಿದೆ.

ಸಮಾಜದಲ್ಲಿ ಒಂಟಿ ಹೆಣ್ಣನ್ನು ಯಾವ ದೃಷ್ಟಿಯಲ್ಲಿ ನೋಡುತ್ತಾರೆ. ಎಂಬುದನ್ನು ಈ 'ಗತಿ' ಕಾದಂಬರಿಯಲ್ಲಿ ಕಾಣಬಹುದಾಗಿದೆ. ಅದಕ್ಕೆ ಪ್ರತ್ಯುತ್ತರವಾಗಿ ಪ್ರತಿಭಟಿಸಿರುವ ಸೋನಿಯ ಮಾತುಗಳು ಈ ಕೆಳಗಿನಂತಿವೆ. ಸೋನಿ ಒಬ್ಬಳೇ

ಇರುವುದನ್ನು ಗಮನಿಸಿದ ಪೂಜಾರ ಕಾಶಪ್ಪ 'ಸೋನಿ ನಿನಗೊಂದ್ ಮಾತು ತಿಳಿಸಬೇಕಾಗೈತಿ!" ಎಂದು ಹೇಳಿದ "ಏನ್ ಕಾಶಣ್ಣ ಅದು?" ಎಂದು ಕೇಳಿದಳು.

"ಮೊನ್ನೆ ನೀ ಕಾರೇಕಾಯಿ ಮಾರಲಿಕ್ಕಂತ ಊರೊಳಗ ಹೋಗಿದ್ಯಂತಲ್ಲ?"

"ಹೌದು ಮಂದಿ ವಲ್ಲೆ ವಲ್ಲೆ ಅಂದು ಬಿಟ್ರು ಹಗಲೆಲ್ಲ ಸುತ್ತಾಡಿದ್ರೂ ಮೂರು ರೂಪೈಸುದ್ದ ಜಮಾಯಿಸಲಿಲ್ಲ...."

"ನೀ ಪುಟ್ಟಿ ಹೊತಗೊಂಡು ಖಾಲಿ 2–3 ರೂಪೈಗೆ ಈಟೊಂದು ತ್ರಾಸು ಪಡೋದು ಯದಕ್ಕ ಸೋನಿಬಾಯಿ? ಸುಮ್ನ ನಾ ಹೇಳಿದ್ಹಂಗ ಕೇಳು ಕುಂತ ಜಾಗದಾಗ 20–30 ರೂಪೈ ಸಿಗತಾವ!.

"ಅದ್ ಹ್ಯಾಂಗ್" ಸೋನಿ ಅಚ್ಚರಿಯಿಂದ ಕೇಳಿದಳು

"ಊರ್ ಚೇರ್ಮನ ದೊಣ್ಣಿಯವರು ನಿನಗ್ಗೊತ್ತಲ್ಲ?.....

ಆತ ಕೇಳಿದ "ನಾನೆಂದು ಕಂಡೀನೋಯಿಪ್ಪ?"

"ನೀ ಆತನ್ನ ಕಂಡಿಲ್ಲ, ಆದ್ರ ಆತ ನಿನ್ನನ್ನು ಕಂಡು ಬಾಳ ಮೆಚ್ಚಿಕೊಂಡಾನ ಆಕಿ ಬೇಡಿದಷ್ಟು ರೊಕ್ಕ ಕೊಡಲಿಕ್ಕಾ ತಯಾರದೀನಿ ಅನ್ನಾಕ್ಹತ್ತಾನ ?...." ಕಾಶಪ್ಪ ಹಲ್ಲುಗಿಂಡಿ ಪಿಸುಗಟ್ಟಿದಾಗ ಸೋನಿಗೆ ಅವನ ಇರಾದೆ ಏನೆಂಬುದು ಸ್ಪಷ್ಟವಾಯಿತು.

"ಗುಡಿ ಪೂಜಾರ್ಕಿ ಮಾಡೋ ಮನ್ಸ ಆಗಿ ಇಂಥ ಲುಚ್ಚಾದಂದಿಗ ಇಳಿದೀಯಲ್ಲಣ್ಣ! ನಾಚ್ಗಿ ಬರಂಗಿಲ್ಲೇನು ನಿನ್ಗ ? ಎಂದು ಪ್ರತಿಭಟಿಸಿ ಮಾತನಾಡಿದಳು.

"ಹಿಂಗೆಲ್ಲಾ ನಾಚಿಗಿ ಪಟ್ಟುಕೊಂಡು ಕುಂತ್ವಂದ್ರ ನಮ್ಮಂಥ ಬಡವರ ಹೊಟ್ಟೆ ಹ್ಯಾಂಗ ತುಂಬೇಕ್ ಹೇಳು?"

"ಬಡವ್ರು ಹೊಟ್ಟೆಗಿಲ್ಲಂತ ಯಾರರ ಹೇಲು ತಿಂತಾರೇನೂ?... ಹಂಗಾದ್ರ ನಿನ್ನ ಹೆಂಡ್ತಿನ ಕಳ್ಸು ಆತನ ಬಲ್ಲಿ....? ಎಂದು ವಿರೋಧಿಸಿ ಪ್ರತಿಭಟಿಸುವುದು ಕಂಡು ಬರುತ್ತದೆ.

ಇದೇ ರೀತಿ ಅನ್ಯಾಯಕ್ಕೆ, ತುಳಿತಕ್ಕೆ ಒಳಗಾದ ವ್ಯಕ್ತಿಗಳು ಒಂದು ವ್ಯವಸ್ಥೆ ವಿರುದ್ಧ, ವ್ಯಕ್ತಿಗಳ ವಿರುದ್ಧ ಮಾರ್ಮಿಕವಾಗಿ ಅಥವಾ ಪರೋಕ್ಷವಾಗಿ ತಮ್ಮ ವಿರೋಧವನ್ನು ಅಭಿವ್ಯಕ್ತಪಡಿಸುವ ಹಿನ್ನಲೆಯಲ್ಲಿ ಬಳಕೆಯಲ್ಲಿ ಬಳಕೆಯಾದಂತಹ ಭಾಷೆಯು ಪ್ರತಿರೋಧದ ಭಾಷೆ ಎನ್ನಲಾಗಿದೆ. ಇಲ್ಲಿ ಅನ್ಯಾಯಕ್ಕೆ ಒಳಗಾದವರ ರೋಧನೆಯು ಕಂಡು ಬರುತ್ತದೆ.

ಬರಗೂರು ರಾಮಚಂದ್ರಪ್ಪನವರ 'ಶಬರಿ' ಕಾದಂಬರಿಯಲ್ಲಿ ಶಬರಿಯ ಗಂಡ ಚಂದ್ರ ಸತ್ತನಂತರ ಊರಿನ ಧಣಿ ನರಸಿಂಹರಾಯಪ್ಪ ಶಬರಿಯನ್ನು 'ಕೂಡಿಕೆ' ಮಾಡಿಕೊಳ್ಳುವ ಪ್ರಸಂಗ ಬಂದಾಗ ಶಬರಿ ಸಾಗರದ ಮೌನದಂತೆ ಪ್ರತಿರೋಧಿಸುವುದನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ.

ಒಡೆಯ ನರಸಿಂಹರಾಯಪ್ಪ ಅಮವಾಸ್ಯೆಯಂತೆ ಕಾಡಿದ ಹೇಗಿದ್ದರೂ ಮದುವೆಯಾದ ಗಂಡನಿಲ್ಲ; ಒಂದು ದಿನವೂ ಆತನೊಂದಿಗೆ ಬಾಳುವೆ ಮಾಡಲಿಲ್ಲ, ಶ್ರೀಮಂತರು, ಭೂಮಾಲೀಕರು ಹಣ ನೀಡಿ ಹೆಣ್ಣಿನ ಕೂಡಿಕೆ ಮಾಡಿಕೊಳ್ಳವ ಪ್ರವೃತ್ತಿ ಒಂದು ಪದ್ಧತಿಯೇ ಆಗಿ ಬಿಟ್ಟಿದೆ. ಅದರಂತೆ ತಾನೇಕೆ ಶಬರಿಯನ್ನು ಪಡೆಯಬಾರದು? ಹೀಗೆ ಅನ್ನಿಸಿದ್ದೇ ತಡ ಒಡೆಯ ನರಸಿಂಹರಾಯಪ್ಪ ತಿಮ್ಮರಾಯಿಗೆ ಹೇಳಿ ಕಳಿಸಿದ್ದ. ಒಡೆಯನ ಮಾತಿಗೆ ಎದುರಾಡದೇ ತಿಮ್ಮರಾಯಿ ಬಂದು ರಾತ್ರಿ ಚಿಂತೆಯಲ್ಲಿ ಮುಳುಗಿದ ತಂದೆ ಚಡಪಡಿಸುತ್ತಿರುವುದನ್ನು ಕಂಡ ಶಬರಿ ತಾನೇ ಕೇಳಿದಳು.

"ಯಾಕಪ್ಪೊ ಒಂತರಾ ಇದ್ದೀಯಾ? ಏನಾತು ತಿಮ್ಮರಾಯಿ ಮಗಳ ಮುಖ ನೋಡಿದ

"ನನ್ ಬಾಳ್ಕೇವ್ ಇಂಗಾತು ಅಂಬ್ತ ಸಂಕಟಾನೇನಪ್ಪ? ನೀನ್ ಯಾತ್ರುದು ಸಿಂತೆ ಮಾಡ್ ಬ್ಯಾಡ್, ಗಂಡಮಗ ಇದ್ದಂಗಿರ್ತೀನಿ" ಆಗ ತಿಮ್ಮರಾಯಿ ಮೆಲ್ಲಗೆ ಮಾತು ಶುರುಮಾಡಿದ.

"ಬಾಯಗೇಳ್ದಂಗೆಲ್ಲ ಇರಾಕಾಯ್ತದ ಮಗ್ಳೆ?"

"ಯಾಕಪ್ಪ ಆಗಾಕಿಲ್ಲ? ನಾನಿಲ್ ಇರಾದ ನಿಂಗ್ ಸರ್‌ಬರಾಕಿಲ್ವ? ಯೇಳು"

"ಎಲ್ಲಾನ ಉಂಟಾ ಮಗ್ಳೆ? ಕಣ್ಣಿದ್ರಿಗೇ ಮಗಳಿದ್ರೆ ಬ್ಯಾಡ ಅಂಬಾಕಾಯ್ತದ? ಆದ್ರೆ ಸಾಯಾಗಂಟ ಇಂಗೇ ಇರಾಕಾಯ್ತದ ಯೇಳು ಮತ್ತೇ ಅದ್ಕೆ ಒಂದ್ ವಿಸ್ಯ ಯೇಳಾನ ಅಂಬ್ತಿ ಇದ್ನಿ"

"ಏನಪ್ಪ?"

"ಅದೇ... ಅದೇ... ಒಡೇರ್ ಕರಿಸ್ಕಂಡಿದ್ರು"...

"ಯಾಕಂತೆ?"....

"ನಿನ್ನ.... ನಿನ್ನ.... ಕೂಡಿಕೆ ಮಾಡ್ಕಂಬ್ತಾರಂತೆ"

ಶಬರಿ ಸಿಟ್ಟಾಗಲಿಲ್ಲ ಸ್ವಲ್ಪ ಹೊತ್ತು ಸುಮ್ಮನಿದ್ದು ಕೇಳಿದಳು.

"ಅದಕ್ ನೀನೇನಂದೆ?"

"ನಿನ್ನನ್ ಕೇಳಿ ಯೇಳ್ತೀನಿ ಅಂದೇ"

"ನನ್ನೇನ್ ಇದ್ರಾಗ ಕೇಳಾದು?

ತಿಮ್ಮರಾಯಿಗೆ ಅಚ್ಚರಿ ಆಗಿ ಮಗಳ ಮುಖ ನೋಡಿದ ಶಬರಿ ಮಾತು ಮುಂದುವರೆಸಿದಳು.

"ನನ್ ಕೇಳ್ತೀನಿ ಅಂಬಾದ್ಕಿಂತ ಅಲ್ಲೆ ಯೇಳ್ ಬರ್ಬೇಕಿತ್ತು .ಇದು ಆಗಾವೋಗೊ ಮಾತಲ್ಲ, ನನ್ ಮಗಳು ಒಪ್ಪಾಕಿಲ್ಲ ಅಂಬ್ತ"

"ಒಡೇರ್ಗೆ ಅಂಗೇಳಾಕಾಯ್ತದ. ಮಗ್ಳೆ?"

"ಮಗಳಿಗೆ ಇಂಗೇಳಾಕಾಯ್ತದೆ ಅಲ್ವೇನಪ್ಪ ?"

ಶಬರಿಯ ವ್ಯಂಗ್ಯ–ವೇದನೆ ಪ್ರತಿರೋಧದ ಮಾತಿಗೆ ತಿಮ್ಮರಾಯಿ ಮೌನವಾದ. ಇಲ್ಲಿ ಶಬರಿಯು ಶಾಂತ ಸಾಗರದಂತೆ ಮೌನವಾಗಿದ್ದು ವ್ಯಂಗ್ಯ ರೂಪದಲ್ಲಿ ಊರಗೌಡನ ವಿರುದ್ಧ ತನ್ನ ತಂದೆಯ ಎದುರಿಗೆ ಪ್ರತಿರೋಧಿಸುತ್ತಾಳೆ.

ಬಿ. ಟಿ. ಲಲಿತಾನಾಯಕ್‌ರ 'ಗತಿ' ಕಾದಂಬರಿಯಲ್ಲಿ ಸೋನಿ, ಲಚ್ಚಿ, ಸೋನಿಯ ಮಗಳು ಸೀತಾ, ಹರಸಿಂಗ್, ಮಾನ್ಸಿಂಗ್, ಚಂದು ಹಲವಾರು ಪಾತ್ರಗಳು ಬರುತ್ತವೆ. ಈ ಎಲ್ಲಾ ಪಾತ್ರಗಳು ತಮ್ಮ ಪ್ರತಿರೋಧನೆಯ ಭಾಷೆಗಳನ್ನು ಪ್ರಸ್ತುತ ಕಾದಂಬರಿಯಲ್ಲಿ ಅಭಿವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ.

ಸೀತಾ ಪುಟ್ಟ ಹುಡುಗಿ ಅವಳು ಮಾನಸಿಂಗ್‌ನ ಮಗಳಾದರೂ ಸಹಿತ ಅವಳಿಗೆ ಆದ ವೇದನೆ ಸಂಕಟದಿಂದ ಸ್ವತ: ತನ್ನ ತಂದೆಯನ್ನೇ ತಿರಸ್ಕರಿಸುತ್ತಾಳೆ ಈ ಪ್ರತಿರೋಧನೆಯ ವೇದನೆಯನ್ನು ತಾಯಿ ಸೋನಿ ಮತ್ತು ಕಾಕಾ ಚಂದುವಿನಲ್ಲಿ ತೋಡಿಕೋಳ್ಳುವ ಭಾಷೆಯನ್ನು ನಾವಿಲ್ಲಿ ನೋಡುತ್ತೇವೆ.

ದಿಬ್ಬದ ಪ್ರಾಥಮಿಕ ಶಾಲೆಯ ಕಟ್ಟಡ ಮುಗಿದಮೇಲೆ ಅದರ ಪ್ರಾರಭೋತ್ಸವ ದಿನ ಮಾನ್ಸಿಂಗ್ ಚಂದು ಮತ್ತು ಸೋನಿಯನ್ನು ಎಲ್ಲರ ಎದುರಿಗೆ ಹೊಡೆದನು. ಇದನ್ನು ಗಮನಿಸಿದ ಸೀತಾ ಸ್ನೇಹಿತೆಯ ಮನೆಯಲ್ಲಿ ಹೊತ್ತು ಕಳೆದು 'ಅವ್ವಾ' ಎಂದು ಕೂಗುತ್ತಾ ಅಲ್ಲಿಗೆ ಬಂದಳು. "ಇನ್ನೂ ಮಲಗಿಲ್ಲೇನು ಸೀತಾ? ಬಾ ಇಲ್ಲಿ" ಎಂದು ಚಂದು ಅಕ್ಕರೆಯಿಂದ ಕರೆದನು. ಸೀತಾ ಅವನ ಬಳಿ ಹೋಗಿ ಕೊರಳಲ್ಲಿ ತಬ್ಬಿಕೊಂಡು "ಚಂದುಕಾಕಾ, ಆತ ನಿನಗ ಎಷ್ಟು ಬಡಿದುಬಿಟ್ಟನಲ್ಲಾ! ಅವ್ವನಿಗೂ ಬಡ್ದಾ!.... ಅವನನ್ನ ಪೋಲಿಸರಿಗ ಹಿಡಿದುಕೊಡು ಕಾಕಾ. ಆತ ಭಾಳ ಕೆಟ್ಟೋನಿದ್ದಾನೆ!" ಎನ್ನುತ್ತ ಅಳತೊಡಗಿದಳು.

ಈ ರೀತಿ ಪ್ರತಿಯೊಂದು ಪಾತ್ರಗಳು ಸಹಿತ ತಮಗಾದ ಅನ್ಯಾಯದ ವಿರುದ್ಧ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪ್ರತಿರೋಧನೆಯ ಭಾಷೆಯನ್ನು ಬಳಸುತ್ತಾರೆ. ಇದು ಕೇವಲ ಬುಡಕಟ್ಟು, ದಲಿತ, ಕೆಳವರ್ಗ ಶೋಷಿತರ ವರ್ಗಗಳಲ್ಲಿ ಇರಬಹುದಾದ ರೋಗವಲ್ಲ. ಎಲ್ಲಾ ಹಳ್ಳಿಗಾಡುಗಳಲ್ಲಿ, ಪಟ್ಟಣಗಳಲ್ಲಿಯೂ ಇರಬಹುದಾದಂತಹ ಕರ್ಮಕಥೆಯಾಗಿದೆ. ಇಲ್ಲಿ ಗೊಡ್ಡು ಸಂಪ್ರದಾಯಗಳು ಕಂದಾಚಾರ ಪದ್ಧತಿಗಳು, ಜೀವವಿರೋಧಿ ಮೂಢನಂಬಿಕೆಗಳು, ದೇವರು–ಧರ್ಮದ ಹೆಸರಿನಲ್ಲಿ ಶೋಷಿಸುವ ಪುರೋಹಿತಶಾಹಿಗಳು, ಅನಕ್ಷರತೆ, ಬಡತನ, ದಾರಿದ್ರ್ಯ ತುಂಬಿ ತುಳುಕುತ್ತಿವೆ.

ಈ ಮೇಲಿನ ಅನೇಕ ಉದಾಹರಣೆಗಳ ಹಿನ್ನೆಲೆಯಲ್ಲಿ ಹೇಳುವುದಾದರೆ, ದಲಿತ–ಬಂಡಾಯದ ಕೆಲವು ಕಾದಂಬರಿಗಳಲ್ಲಿ ಕೆಳವರ್ಗದ ಪಾತ್ರಗಳು ಅನ್ಯಾಯಕ್ಕೊಳಗಾದ ಸಂದರ್ಭಗಳಲ್ಲಿ ಮೇಲುವರ್ಗದವರನ್ನು ಪ್ರತಿಭಟಿಸಿ ಮಾತನಾಡಿರುವುದನ್ನು ಕಾಣಬಹುದು. ಅದಕ್ಕೆ ಮುಖ್ಯವಾಗಿ ಅವರ ಮೇಲಿನ ದೌರ್ಜನ್ಯಗಳು, ನೋವುಗಳು ಕಾರಣಗಳಾಗಿರುತ್ತವೆ. ಸಾಮಾಜಿಕವಾಗಿ ಬಲಉಳ್ಳವರು ಬಲಹೀನರ ಮೇಲೆ ಹೆಚ್ಚು ದಬ್ಬಾಳಿಕೆ ಮಾಡುವರು ಎನ್ನುವುದನ್ನು ಅನೇಕ ಕಾದಂಬರಿಗಳಲ್ಲಿ ನೋಡಬಹುದಾಗಿದೆ. ದಲಿತ–ಬಂಡಾಯದ ಹಲವಾರು ಕಾದಂಬರಿಗಳಲ್ಲಿ ದಲಿತರು ಮೇಲ್ವರ್ಗದವರ ಸೇವೆ ಮಾಡುತ್ತಾ ತಮ್ಮ ಬದುಕಲ್ಲಿ ಶೋಷಣೆಗೆ ಒಳಗಾಗಿ ಅಸಹಾಯಕರಾಗಿ ಜೀವಿಸುವುದನ್ನು ನಿರೂಪಿಸುತ್ತಾರೆ. ಅವರು ಈ ಮೇಲಿನ ಉದಾಹರಣೆಗಳಂತೆ ಮೇಲ್ವರ್ಗದವರನ್ನು, ವ್ಯವಸ್ಥೆಯನ್ನು ನೇರವಾಗಿ ಪ್ರತಿಭಟಿಸುವುದರ ಜೊತೆಗೆ ಪ್ರತಿರೋಧನೆಯನ್ನು ಅಭಿವ್ಯಕ್ತಪಡಿಸುವುದು ಕಂಡುಬರುತ್ತದೆ. ಪ್ರಸ್ತುತ ಸಮಾಜದಲ್ಲಿಯೂ ಏನೆಲ್ಲ ಬದಲಾವಣೆಗಳಾಗಿವೆ ಎಂದರೂ ಒಂದು ಉನ್ನತ ಸ್ಥಾನದಲ್ಲಿರುವವರ ಹಾಗೂ ಆರ್ಥಿಕ ಸಬಲತೆ ಹೊಂದಿರುವವರ ಮುಂದೆ ಜನಸಾಮಾನ್ಯರು ಅಸಹಾಯಕರಾಗಿಯೇ ಇರುವಂತಹದ್ದನ್ನು ಕಾಣಲಾಗುತ್ತದೆ. ಅದರಿಂದ ಯಾವುದೇ ರೀತಿಯಲ್ಲಿ ತಮಗೆ ಅನ್ಯಾಯವಾದರೂ ಸಾಮಾನ್ಯ ಜನ ಅದನ್ನು ವಿರೋಧಿಸುವಂತಹ ಶಕ್ತಿಯನ್ನು ಸಮಾಜದಲ್ಲಿ ಸಮರ್ಥವಾಗಿ ಪಡೆಯುವಲ್ಲಿ ಸಾಧ್ಯವಾಗಿಲ್ಲದಿರುವುದನ್ನು ಅನೇಕ ಕಾದಂಬರಿಗಳಲ್ಲಿನ ಪಾತ್ರಗಳ ಭಾಷೆಯ ಧ್ವನಿಯೊಂದಿಗೆ ಉಲ್ಲೇಖಿಸಬಹುದಾಗಿದೆ.

ಆಕರ ಗ್ರಂಥಗಳು

1. ಬರಗೂರು ರಾಮಚಂದ್ರಪ್ಪ. (2023). *ಶಬರಿ.* ಅಂಕಿತ ಪುಸ್ತಕ.
2. ಲಲಿತಾ ನಾಯಕ್.ಬಿ.ಟಿ (2014). *ಗತಿ.* ಕನ್ನಡ ಸಾಹಿತ್ಯ ಪರಿಷತ್ತು.

ಪರಾಮರ್ಶನ ಗ್ರಂಥಗಳು

- ಮಲ್ಲಪ್ಪ ಬಂಡಿ, ಎನ್. (2023). *ಪ್ರತಿಧ್ವನಿ.* ಅಭ್ಯುನ್ನತಿ ಪ್ರಕಾಶನ.
- ನಾರಾಯಣ, ಕೆ.ವಿ. (2009). *ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ನಾರಾಯಣ, ಕೆ.ವಿ. (ಸಂ.) (2009). *ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–1 ಭಾಷೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಪುರುಷೋತ್ತಮ ಬಿಳಿಮಲೆ (2017). *ಬಂಡಾಯ ದಲಿತ ಚಳುವಳಿ ಮತ್ತು ಸಾಹಿತ್ಯ.* ಅಭಿನವ ಪ್ರಕಾಶನ.
- ವೀರಭದ್ರಪ್ಪ, ಹೆಚ್. (2022). *ಕನ್ನಡ ಸಣ್ಣಕಥೆಗಳ ಭಾಷೆ ಮತ್ತು ಸ್ವರೂಪ.* [ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ] ಕನ್ನಡ ವಿಶ್ವವಿದ್ಯಾಲಯ,